# ಕರ್ನಾಟಕ ಸರಕಾರ

## ***<u>ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು</u>***

## ***<u>ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರ ಸಭೆಯ ನಡವಳಿಗಳು</u>***

ದಿನಾಂಕ 25-05-2013ರಂದು ಪೂರ್ವಾಹ್ನ ಗಂಟೆ 11.30ಕ್ಕೆ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು ಇವರ ಅಧ್ಯಕ್ಷತೆಯಲ್ಲಿ 3 ಜಿಲ್ಲೆಗಳ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರ ಸಭೆಯು ವಿವೇಕಾನಂದ ಕಾಲೇಜು, ಪುತ್ತೂರು ಇಲ್ಲಿ ಜರಗಿದ ಪ್ರಾದೇಶಿಕ ಮಟ್ಟದ ಸಭೆಯ ನಡವಳಿಗಳ ವಿವರಗಳು ಈ ಕೆಳಗಿನಂತಿವೆ.

ಸಭೆಯ ಪ್ರಾರಂಭದಲ್ಲಿ ವಿವೇಕಾನಂದ ಕಾಲೇಜು, ಪುತ್ತೂರು, ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಾಧವ ಭಟ್‌ರವರು ಮಾನ್ಯ ಜಂಟಿ ನಿರ್ದೇಶಕರನ್ನು, ಎಲ್ಲಾ ಕಾಲೇಜಿನ ಪ್ರಾಂಶುಪಾಲರನ್ನು ಮತ್ತು ಸಹಾಯಕ ನಿರ್ದೇಶಕರನ್ನು ಹಾಗೂ ಸಿಬ್ಬಂಧಿ ವರ್ಗದವರನ್ನು ಸ್ವಾಗತಿಸುತ್ತಾ ಈ ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲು ಮಾನ್ಯ ಜಂಟಿ ನಿರ್ದೇಶಕರನ್ನು ಕೋರಿದರು.

***************

1. **<u>ಬಾಕಿ ವೇತನದ ಬಗ್ಗೆ:</u>** ಈಗಾಗಲೇ ಡಿ.ಎ (ತುಟ್ಟಿ ಭತ್ಯೆ ಬಾಕಿ ಬಿಲ್ಲು)ಗಳನ್ನು ಎಲ್ಲಾ ಕಾಲೇಜುಗಳಿಗೆ ಕಳುಹಿಸಲಾಗಿದೆ. ಉಳಿದಂತೆ ನಿವೃತ್ತ ಸಿಬ್ಬಂಧಿಗಳ ಗಳಿಕೆ ರಜೆ, ಗಳಿಕೆ ರಜೆ ಅಧ್ಯರ್ಪಣೆ ಬಿಲ್ಲುಗಳನ್ನು ನೀಡಲಾಗಿದೆಯೆಂದು ತಿಳಿಸಿದರು. ಇನ್ನು ಮುಂದಕ್ಕೆ ಬಾಕಿ ವೇತನದ ಇಂಡೆಂಟನ್ನು ಜಂಟಿ ನಿರ್ದೇಶಕರಿಗೆ ಕಳುಹಿಸಿ ಅಪ್ರೂವ್ ಮಾಡಿದ ನಂತರ ಕೇಂದ್ರ ಕಚೇರಿಗೆ ಅನುದಾನದ ಬಟವಾಡೆಗಾಗಿ ಪ್ರಸ್ತಾವನೆ ಕಳುಹಿಸುವಂತೆ ಸೂಚಿಸಿದರು. ಹಾಗೂ ಬಾಕಿ ಮೊತ್ತದ ಬಗ್ಗೆ ಎಷ್ಟು ಮೊತ್ತಕ್ಕ ಕೋರಿಕೆ ಸಲ್ಲಿಸಿದ್ದೀರಿ, ಎಷ್ಟು ಮೊತ್ತ ಅನುಮೋದಿಸಲಾಗಿದೆ. ಎಷ್ಟು ಮೊತ್ತ ಬಾಕಿಯಿರುತ್ತದೆ ಎಂಬುದನ್ನು ಪ್ರಾಂಶುಪಾಲರು ಜಂಟಿ ನಿರ್ದೇಶಕರ ಕಛೇರಿಗೆ ವಿವರಗಳೊಂದಿಗೆ ಕಳುಹಿಸುವಂತೆ ಸೂಚಿಸಿದರು.
2. **<u>ಪಿ.ಹೆಚ್.ಡಿ ಬಡ್ತಿ ಕುರಿತು:</u>** , ಪಿ.ಹೆಚ್.ಡಿ ಇಂಕ್ರಿಮೆಂಟ್ ಮಂಜೂರಾತಿಯ ಕುರಿತಂತೆ ಆಡಳಿತ ಮಂಡಳಿಯ ಠರಾವು ಹಾಗೂ ಸರಕಾರಿ ಆದೇಶದ ಪ್ರತಿ ಲಗತ್ತಿಸುವಂತೆಯೂ ಸಲಹೆ ನೀಡುತ್ತಾ ಪ್ರಸ್ತಾವನೆ 2 ತಿಂಗಳೊಳಗಾಗಿ ಕಳುಹಿಸುವಂತೆ ಸೂಚಿಸಲಾಯಿತು.
3. **<u>ಹೆಚ್.ಆರ್.ಎಂ.ಎಸ್ ಬಗ್ಗೆ</u>** 34 ಕಾಲೇಜುಗಳಲ್ಲಿ 22 ಕಾಲೇಜುಗಳು ಮಾತ್ರ ಹೆಚ್.ಆರ್.ಎಂ.ಎಸ್ ಪೂರ್ತಿಗೊಳಿಸಿದ್ದು 12 ಕಾಲೇಜುಗಳು ಬಾಕಿಯಿರುತ್ತದೆ. ಈ ಬಗ್ಗೆ ತಕ್ಷಣವೇ ಕೇಂದ್ರ ಕಚೇರಿಗೆ ತೆರಳಿ ಸಂಬಂಧಿಸಿದವರ ಜೊತೆ ಈ ಬಗ್ಗೆ ಚರ್ಚಿಸಿ ಸರಿಪಡಿಸುವಂತೆ ಸೂಚಿಸುತ್ತಾ ಈ ದಿಶೆಯಲ್ಲಿ ಹೆಚ್.ಆರ್.ಎಂಎಸ್ ಮುಖಾಂತರವೇ ವೇತನ ಪಾವತಿಯಾಗುವಂತೆ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
4. 25 ಮತ್ತು 30 ವರ್ಷಗಳ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ತುರ್ತಾಗಿ ಆಡಳಿತಮಂಡಳಿಯವರ ಠರಾವಿನೊಂದಿಗೆ ಪ್ರಸ್ತಾವನೆಯನ್ನು ಕಳುಹಿಸುವುದು. ಈ ಹಿಂದೆ ಕಳುಹಿಸಿದ

ಪ್ರಸ್ತಾವನೆಯಲ್ಲಿ ವ್ಯತ್ಯಾಸವಿದ್ದು ತಪ್ಪನ್ನು ಸರಿಪಡಿಸಿ ಮತ್ತೊಮ್ಮೆ ಜಂಟಿ ನಿರ್ದೇಶಕರಿಗೆ ಪ್ರಸ್ತಾವನೆ ಕಳುಹಿಸುವಂತೆ ಸೂಚಿಸಲಾಯಿತು.

5. **ಎಲ್.ಐ.ಸಿ:** ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಯಲ್ಲಿ ಕೆಲವು ಪ್ರಾಂಶುಪಾಲರ ಹೆಸರನ್ನು ನಮೂದಿಸುವ ಬಗ್ಗೆ ಕ್ರಮಕೈಗೊಳ್ಳಬೇಕಿದೆ ಅದರ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು.
6. **ವರ್ಕ್‌ಡೈರಿ ಬಗ್ಗೆ:** ದಿನಚರಿಯನ್ನು ಉಪನ್ಯಾಸಕರುಗಳು ನಿರ್ವಹಣೆ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ವರ್ಕ್‌ಡೈರಿಯ ಪ್ರತಿಯನ್ನು ಡಾ. ಯಶೋವರ್ಮ ಇವರ ಬಳಿ ನೀಡಲಾಗಿ ಉಳಿದ ಕಾಲೇಜಿನ ಪ್ರಾಂಶುಪಾಲರು ಸದರಿಯವರಿಂದ ಪ್ರತಿಗಳನ್ನು ಪಡೆಯುವಂತೆ ಸೂಚಿಸಿ ಈ ಪ್ರತಿಯಂತೆ ದಿನಚರಿಯನ್ನು ನಿರ್ವಹಿಸುವಂತೆ ತಿಳಿಸಿದರು.
7. **ಮಾದಕ ದ್ರವ್ಯಗಳ ಬಗ್ಗೆ:** ಈ ಬಗ್ಗೆ ಪ್ರತೀ ಕಾಲೇಜಿನಲ್ಲಿ ಒಂದು ಸಮಿತಿಯನ್ನು ರಚಿಸಬೇಕು ಇದರಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿಗಳಿಗೆ ಕೌನ್ಸಿಲಿಂಗ್ ಆಗಬೇಕು ಮತ್ತು ವಿದ್ಯಾರ್ಥಿಗಳನ್ನು ಒಳ್ಳೆಯ ನಾಗರೀಕರನ್ನಾಗಿ ಮಾಡುವಂತೆ ಕಾರ್ಯನ್ಮುಖರಾಗುವಂತೆ ಮಾಡುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರಾದ್ದಾಗಿರುತ್ತದೆಯೆಂದು ತಿಳಿಸಿದರು. ಈ ಕಮಿಟಿಯಲ್ಲಿ ಏನೇನು ಮಾಡಿದ್ದೇವೆಯೆಂದು ಜಂಟಿ ನಿರ್ದೇಶಕರಿಗೂ ಇಮೇಲ್ ಮುಖಾಂತರ ವರದಿ ಸಲ್ಲಿಸುವಂತೆಯೂ ಸೂಚಿಸಲಾಯಿತು. ಈ ಬಗ್ಗೆ ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ತಿಳಿಸುತ್ತಾ ಈ ಬಗ್ಗೆ ಏನಾದರೂ ತೊಂದರೆಯಾದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳನ್ನು ಅಥವಾ ಜಂಟಿ ನಿರ್ದೇಶಕರವರನ್ನು ಸಂಪರ್ಕಿಸುವಂತೆ ಸಲಹೆ ನೀಡಲಾಯಿತು.
8. **ಸ್ವೀಪ್ ಬಗ್ಗೆ:** ಮತದಾನದ ಕುರಿತಂತೆ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜುಗಳಲ್ಲಿ ಕಾರ್ಯಕ್ರಮ ನಡೆಸಿರುವುದಾಗಿ ತಿಳಿಸಿದರು. ಈ ಬಗ್ಗೆ ಜಂಟಿ ನಿರ್ದೇಶಕರು ವಿದ್ಯಾರ್ಥಿಗಳಿಗೆ , ಸಾರ್ವಜನಿಕರಿಗೆ ಮಾಹಿತಿ ನೀಡಲು ಒಂದು ಕಮಿಟಿಯನ್ನು ರಚಿಸಿ, ಆ ಮುಖಾಂತರ ಕಾರ್ಯಕ್ರಮ ಆಯೋಜಿಸಿ ಈ ಬಗ್ಗೆ ವಿವರವನ್ನು ಸಲ್ಲಿಸುವಂತೆಯೂ ಸಾಧ್ಯವಾದಲ್ಲಿ ಈ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಚುನಾವಣಾಧಿಕಾರಿಗಳಾದವರನ್ನು ಆಹ್ವಾನಿಸುವಂತೆ ಈ ಸಭೆಯಲ್ಲಿ ಚರ್ಚಿಸಲಾಯಿತು.
9. **ಆರ್.ಟಿ.ಐ ಬಗ್ಗೆ:** ಮಾಹಿತಿ ಹಕ್ಕು ಆದಿನಿಯಮದ ಕುರಿತಂತೆ, ಯಾವ ಮಾಹಿತಿ ನೀಡಬೇಕು ಯಾವ ಮಾಹಿತಿ ನೀಡಬಾರದು ಎಂಬುದನ್ನು ಸಭೆಯಲ್ಲಿ ವಿವರಿಸಿದರು. ನೌಕರರ ವೈಯಕ್ತಿಕ ವಿಚಾರದ ಬಗ್ಗೆ ತಿಳಿಸಬೇಕಾಗಿಲ್ಲ. ಅರ್ಜಿದಾರನು ಕೇಳಿದ ಮಾಹಿತಿ ಲಭ್ಯವಿದ್ದಲ್ಲಿ ಮಾತ್ರ ಕೊಡಬಹುದು. ಲಭ್ಯವಿರದ ಮಾಹಿತಿಯನ್ನು ಸಂಬಂಧಿಸಿದವರಿಂದ ಪಡೆಯುವಂತೆ ತಿಳಿಸಬಹುದು. ಈ ಮಾಹಿತಿಯನ್ನು 30 ದಿವಸದೊಳಗಾಗಿ ನೀಡುವಂತೆಯೂ ವೈಯಕ್ತಿಕವಾಗಿ ಅರ್ಜಿದಾರನು ಬಂದಲ್ಲಿ ಅರ್ಧ ಗಂಟೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬಹುದು. ಅರ್ಧ ಗಂಟ ಮೇಲ್ಪಟ್ಟು ಇದ್ದಲ್ಲಿ 20 ರೂಪಾಯಿಗಳನ್ನು ಪಡೆಯಬೇಕಾಗಿರುತ್ತದೆ.
10. **ಯುಜಿಸಿ ಬಾಕಿ** – 29-12-2009ರಿಂದ 31-03-2010ರವರೆಗೆ ಮಾತ್ರ ಲೆಕ್ಕ ಮಾಡಿ ಕಳುಹಿಸುವಂತೆ ಸೂಚಿಸಲಾಗಿತ್ತು. ಈ ಬಗ್ಗೆ ಪ್ರತೀ ಕಾಲೇಜುಗಳಿಗೆ ಸರಕಾರಿ ಆದೇಶ ಕಳುಹಿಸಲಾಗಿದೆ. ಅದರಂತೆ ಕ್ರಮ ಜರುಗಿಸಲು ಸೂಚಿಸಲಾಯಿತು.

11. **<u>ಪ್ರಭಾರ ಪ್ರಾಂಶುಪಾಲರು:</u>** ಒಟ್ಟು 22 ಕಾಲೇಜುಗಳಲ್ಲಿ ತಾತ್ಕಾಲಿಕ ಪ್ರಭಾರ ಪ್ರಾಂಶುಪಾಲರಿದ್ದಾರೆ. ಈ ಬಗ್ಗೆ ಆಡಳಿತ ಮಂಡಳಿ ಠರಾವು ಪ್ರತಿಯೊಂದಿಗೆ ಜಂಟಿ ನಿರ್ದೇಶಕರಿಗೆ ಕಳುಹಿಸಿ ತಾತ್ಕಾಲಿಕ ನೇಮಕಾತಿ ಅನುಮೋದನೆ ಪಡೆಯುವಂತೆ ಸೂಚಿಸಲಾಯಿತು.

ಅಂತಿಮವಾಗಿ ವಿವೇಕಾನಂದ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಾಧವ ಭಟ್‌ರವರು ಮಾನ್ಯ ಜಂಟಿನಿರ್ದೇಶಕರಿಗೆ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತಾ, ಎಲ್ಲಾ ಪ್ರಾಂಶುಪಾಲರುಗಳಿಗೆ ಆಡಳಿತಾತ್ಮಕ ಸಲಹೆ ನೀಡಿ ಆಡಳಿತದಲ್ಲಿ ಎದುರಾಗುವಂತಹ ಸಮಸ್ಯೆಗಳಿಗೆ ಸ್ಪಂದಿಸಿ ತಕ್ಷಣ ಪರಿಹಾರವನ್ನು ನೀಡುವ ಭರವಸೆಯನ್ನು ನೀಡಿದಕ್ಕಾಗಿ ಜಂಟಿ ನಿರ್ದೇಶಕರವರಿಗೆ ಧನ್ಯವಾದ ಸಲ್ಲಿಸಿದರು. ಮುಂದಿನ ಸಭೆಯನ್ನು ಶ್ರೀ ಮಹಾವೀರ ಕಾಲೇಜು, ಮೂಡಬಿದಿರೆಯಲ್ಲಿ ದಿನಾಂಕ 20-07-2013ರಂದು ನಡೆಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಇಲಾಖಾ ಪರವಾಗಿ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ವಿವೇಕಾನಂದ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕರಿಗೆ ಮತ್ತು ಈ ಕಾರ್ಯಕ್ರಮ ನಡೆಯಿಸಲು ವ್ಯವಸ್ಥೆ ಮಾಡಿರುವ ಶ್ರೀ ಮಾಧವ ಭಟ್ ಪ್ರಾಂಶುಪಾಲರಿಗೆ ಮತ್ತು ಮಾನ ಜಂಟಿ ನಿರ್ದೇಶಕರವರಿಗೆ, ಶ್ರೀ ವೈ.ಎಸ್ ಗಣತಿ ಸಹಾಯಕ ನಿರ್ದೇಶಕರವರು ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಜಂಟಿ ನಿರ್ದೇಶಕರು